ಅ) ಕಾಪುವಿನಲ್ಲಿ ಹಳೆಯ ಇಲಾಖಾ ಪ್ರವಾಸಿ ಮಂದಿರವಿರುವುದು ಸರ್ಕಾರದ ಗಮನಕ್ಕೆ ಬಂದಿದೇಯೆ?

ಈ ಪ್ರವಾಸಿ ಮಂದಿರವು ಲೋಕೋಪಯೋಗಿ ಇಲಾಖಾ ವ್ಯಾಪ್ತಿಗೆ ಬರವುದಿಲ್ಲ. ಇದು ತಾಲ್ಲೂಕು ಪಂಚಾಯತ್ ವ್ಯಾಪ್ತಿಗೆ ಬರುತ್ತದೆ.

ಆ) ಇದು ರಾಷ್ಟ್ರೀಯ ಹೆದ್ದಾರಿ ಪಕ್ಕದಲ್ಲಿದ್ದು, ಮೇಲ್ದರ್ಜೆಗೇರಿಸುವ ಅಗತ್ಯತೆಯ ಬಗ್ಗೆ ಪ್ರಸ್ತಾವನೆ ಇದೆಯೇ?

ಉದ್ಭವಿಸುವುದಿಲ್ಲ

ಇ) ಇದ್ದಲ್ಲಿ ಅಂದಾಜು ಪಟ್ಟಿಯನ್ನು ತಯಾರಿಸಲು ಆದೇಶಸುವುದೆ?

ಉದ್ಭವಿಸುವುದಿಲ್ಲ

ಪ್ರವಾಸೋದ್ಯಮವನ್ನಾಗಿ ಅಭಿವೃದ್ಧಿಪಡಿಸುವುದು.

217 ಶ್ರೀ. ಲಾಲಾಜಿ ಆರ್. ಮೆಂಡನ್(ಕಾಪು)
ಮಾನ್ಯ ಪ್ರವಾಸೋದ್ಯಮ ಮತ್ತು ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಸಚಿವರು

ಅ) ಕಾಪು ದೀಪಸ್ತಂಭವನ್ನು ಪ್ರವಾಸೋದ್ಯಮ ಹಾಗೂ ಕಡಲತೀರಗಳನ್ನೊಳ ಗೊಂಡಂತೆ ಅಭಿವೃದ್ಧಿಗೆ ಯಾವ ರೀತಿಯ ನಕ್ಷೆಯನ್ನು ಕೈಗತ್ತಿಕೊಂಡಿದೆ;

ಉಡುಪಿ ಕಾಪು ದೀಪಸ್ಥಂಬದ ಪ್ರದೇಶದಲ್ಲಿ ಪ್ರವಾಸಿ ಸೌಲಭ್ಯಗಳಾದ ಲಿಂಕ್ ರಸ್ತೆ, ರೈಲಿಂಗ್ಸ್ ಅಳವಡಿಕೆ, ಲೈಟ್ ಹೌಸ್ ಎದುರಿನ ಗುಡ್ಡದಲ್ಲಿ ಆಸನ ವ್ಯವಸ್ಥೆ, ಹಾಗೂ ತೂಗುಸೇತುವೆ ಅಳವಡಿಕೆ, ಶೌಚಾಲಯ ನಿರ್ಮಾಣ, ಪಾರ್ಕಿಂಗ್ ವ್ಯವಸ್ಥೆ, ದೀಪದ ವ್ಯವಸ್ಥೆ ಇತ್ಯಾದಿಗಳನ್ನು ನಿರ್ಮಿಸಲಾಗುತ್ತಿದೆ.

ಆ) ಈ ನಕ್ಷೆಯಿಂತೆ ಕಾರ್ಯಗತ ಮಾಡಲು ತೆಗೆದಿರಿಸಿರುವ ಅನುದಾನವೆಷ್ಟು,

ಉಡುಪಿ ಜಿಲ್ಲೆಯ ಕಾಪು ಬೀಚ್ ಪ್ರದೇಶದಲ್ಲಿ ಪ್ರವಾಸಿ ಸೌಲಭ್ಯಗಳನ್ನು ಅಭಿವೃದ್ಧಿ ಪಡಿಸಲು 2007–08ನೇ ಸಾಲಿನಲ್ಲಿ ಜಿಲ್ಲಾಧಿಕಾರಿಗಳು, ಉಡುಪಿ ಜಿಲ್ಲೆ ರವರಿಗೆ ರೂ.55.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ.

ಇ) ಈ ಸಾಲಿನಲ್ಲಿ ಕಾಮಗಾರಿ ನಡೆಸಲು ಬಿಡುಗಡೆಯಾದ ಅನುದಾನವೆಷ್ಟು?

ಪ್ರಸ್ತುತ 2008–09ನೇ ಸಾಲಿನಲ್ಲಿ ಯಾವುದೇ ಅನುದಾನ ಬಿಡುಗಡೆ ಮಾಡಿರುವುದಿಲ್ಲ.

153 ಶ್ರೀ. ಎಂ.ಟಿ.ಕೃಷ್ಣಪ್ಪ (ತುರುವೇಕೆರೆ)
ಮಾನ್ಯ ಲೋಕೋಪಯೋಗಿ ಸಚಿವರು